**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

**ಸಿ.ಸಿ. ನಂ : 224-2019**

ಚಾ.ಸಾ : 1
ಪ್ರಾ.ಸಾ : 1

ಪ್ರಮಾಣ ವಚನ ಭೋದಿಸಿದ ದಿನಾಂಕ : **07.09.2021**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಅಕ್ಟೋಬರ್ 2017 ನಲ್ಲಿ ಪೊಲೀಸರು ನನ್ನನ್ನು ಕರೆಸಿರುತ್ತಾರೆ ಅಲ್ಲಿ ಒಂದು ಇನೋವಾ ಕಾರು ಹಾಗೂ ಬೊಲೆರೋ ಇದ್ದು ಇನೋವಾ ಕಾರಿನಲ್ಲಿ 8 ಚೀಲಗಳಲ್ಲಿ ತಲಾ 50 ಕೆಜಿ ಕಾಳುಮೆಣಸು ಇತ್ತು, ಅದರ ಮೇಲೆ ಎಕೆಪಿ ಎಂದು ಗುರುತು ಇತ್ತು, ಬೊಲೆರೋ ಕಾರಿನಲ್ಲಿ 7 ಚೀಲಗಳಲ್ಲಿ 1 ಚೀಲದಲ್ಲಿ 40 ಕೆಜಿ ಕಾಳುಮೆಣಸು ಹಾಗೂ ಉಳಿದ 6 ಚೀಲಗಳಲ್ಲಿ ತಲಾ 50 ಕೆಜಿ ಕಾಳುಮೆಣಸು ಇತ್ತು, ಅದರ ಮೇಲೆ ಎಕೆಪಿ ಎಂದು ಗುರುತು ಇತ್ತು, ಅಲ್ಲಿ ಆರೋಪಿ ಅಜೀಜ್ ಹರ್ಷದ್ ಪ್ರಮೋದ್ ಸರ್ಫಾನ್ ಆರೋಪಿಗಳು ಇದ್ದರು. ಆರೋಪಿತರನ್ನು ಪೊಲೀಸರು ದಸ್ತಗಿರಿ ಮಾಡಿ, ಸ್ವತ್ತುಗಳನ್ನು ಸ್ವಾದೀನಪಡಿಸಿಕೊಂಡು ಮಹಜರು ಮಾಡಿಕೊಂಡರು. ನ್ಯಾಯಾಲಯದ ಆದೇಶದಂತೆ ನಾನು ಠಾಣೆಗೆ ಹಾಜರಾಗಿ ಮೇಲೆ ತಿಳಿಸಿದ 15 ಗೋಣಿ ಚೀಲಗಳನ್ನು ತೋರಿಸಿ ಅದರಲ್ಲಿ ಒಂದೊಂದು ಗೋಣಿ ಚೀಲದಿಂದ ತಲಾ 100 ಗ್ರಾಂ ಕಾಳುಮೆಣಸನ್ನು ಹೋರತೆಗೆದು ನನ್ನ ಸಮಕ್ಷಮ ಮಹಜರು

ಮಾಡಿ ಅದಕ್ಕೆ ನನ್ನ ಹಾಗೂ ಸಾಕ್ಷಿಗಳಾದ ಚಾಸಾ-17 ವಿನೋದ್‌ರ ಸಹಿ ಪಡೆದುಕೊಂಡರು. ಈಗ ಸ್ವತ್ತು ಬಿಡುಗಡೆ ಮಹಜರು ನೋಡುತ್ತಿದ್ದು ನಿಪಿ-4 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿ ನಿಪಿ-4 ಎ ಎಂದು ಗುರುತಿಸಲಾಯಿತು.

ನಂತರ ನವಂಬರ್ ತಿಂಗಳು 2017 ರಲ್ಲಿ ಪುತ್ತೂರು ಗ್ರಾಮಾಂತರ ಠಾಣೆಗೆ ನನ್ನನ್ನು ಕರೆಯಿಸಿ 110 ಕೆಜಿ ಕಾಳು ಮೆಣಸನ್ನು ಹಾಗೂ ಆರೋಪಿಗಳಾದ ಹರ್ಷದ್ ಹಾಗೂ ಹಕೀಂ ಇವರುಗಳನ್ನು ತೋರಿಸಿದ್ದು ಸದ್ರಿ ಆರೋಪಿತರನ್ನು ಬೈಪಾಸ್ ರೋಡಿನಲ್ಲಿ ಈಚರ್ ಲಾರಿಯಲ್ಲಿ ಹೋಗುತ್ತಿರುವ ಸಮಯ ದಸ್ತಗಿರಿ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾಳು ಮೆಣಸನ್ನು ನ್ಯಾಯಾಲಯದ ಆದೇಶದಂತೆ ಬಿಡುಗಡೆಮಾಡಿಕೊಂಡಿರುತೆತೇನೆ. 3 ಚೀಲಗಳಿಂದ ತಲಾ 100 ಗ್ರಾಂ ಕಾಳುಮೆಣಸನ್ನು ಮಾದರಿಗಾಗಿ ಹೊರತೆಗೆದು ಸ್ವತ್ತು ಬಿಡುಗಡೆ ಮಹಜರು ಮಾಡಿ ಅದಕ್ಕೆ ನನ್ನ ಸಹಿ ಪಡೆದುಕೊಂಡರು. 50, 35, 25 ಕೆಜಿ ಕಾಳುಮೆಣಸು ಸದರಿ ಮೂರು ಚೀಲಗಳಲ್ಲಿ ಇದ್ದವು. ಸ್ವತ್ತು ಬಿಡುಗಡೆ ಮಹಜರು ನೋಡುತ್ತಿದ್ದು ನಿಪಿ-5 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು.

ಜನವರಿ ತಿಂಗಳಿನ 2018 ರಲ್ಲಿ ಠಾಣೆಗೆ ಕರೆಯಿಸಿ ಸುದೀರ್ ಮತ್ತು ಸಮದ್ ನನ್ನು ಹಾಗೂ ಶೆಡ್ ಬೀಗ ಒಡೆಯಲು ಬಳಸಿದ ಪಿಕಾಸಿಯನ್ನು ತೋರಿಸಿದ್ದು ಅದನ್ನು ನಾನು ಗುರುತಿಸಿರುತ್ತೇನೆ. ಸದರಿ ಆರೋಪಿತರು ಉಳಿದ ಕಾಳುಮೆಣಸನ್ನು ಮಾರಾಟ ಮಾಡಿರುವುದಾಗಿ ನನಗೆ ತಿಳಿಸಿದ್ದಾರೆ. ಪೊಲೀಸರಿಗೆ ನಾನು 6 ಬಾರಿ ಹೇಳಿಕೆ ನೀಡಿರುತ್ತೇನೆ. ಕಳ್ಳತನ ಆದ ವಿಷಯ ನನಗೆ 25.09.2017 ರಂದು ಬೆಳಿಗ್ಗೆ 7.30 ಗಂಟೆಗೆ ನನ್ನ ವಾಹನದ ಚಾಲಕನಾದ ಫಾರೂಕ್ ಕರೆಮಾಡಿ ಕಳ್ಳತನವಾದ ವಿಷಯ ನನಗೆ ಹೇಳಿದರು.

ನ್ಯಾಯಾಲಯದ ಮುಂದಿರುವ ಪಿಕಾಸಿ ನೋಡುತ್ತಿದ್ದು ಮು.ಮಾ.-1 ಎಂದು ಗುರುತಿಸಲಾಗಿದ್ದು, ಒಟ್ಟು 23 ತಲಾ 100 ಗ್ರಾಂ ಕಾಳುಮೆಣಸುಗಳನ್ನು ಒಟ್ಟಾರೆ ಮು.ಮಾ.-2 ಎಂದು ಗುರುತಿಸಲಾಗಿದೆ. ಸ್ಥಳ ಮಹಜರು ಮಾಡುವ ಸಮಯ ತೆಗೆದ 5 ಪೊಟೋಗಳನ್ನು ಒಟ್ಟಾರೆ ನಿಪಿ-6 ಎಂದು, ಬೊಲೆರೋ ಹಾಗೂ ಇನೋವಾ ಕಾರುಗಳಲ್ಲಿ ಸ್ವತ್ತುಗಳ ಸಮೇತ ತೆಗೆದ 6 ಪೋಟೋಗಳನ್ನು ನಿಪಿ-7 ಎಂದು, 2 ಸ್ವತ್ತು ಬಿಡುಗಡೆ ಮಹಜರು ಸಮಯ ತೆಗೆದ ಪೊಟೋಗಳನ್ನು ನಿಪಿ-8 ಹಾಗೂ 9 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದಿರುವ 4 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, 7 ನೇ ಆರೋಪಿತನನ್ನು ವಿಸಿ ಮುಖಾಂತರ ಹಾಜರುಪಡಿಸಿಕೊಂಡು ಸಾಕ್ಷಿಗೆ ತೋರಿಸಿ

ಆತನನ್ನು ಗುರುತಿಸಿರುತ್ತಾರೆ. ಉಳಿದ ಅರೋಪಿತರನ್ನು ಸಾಕ್ಷಿ ಗುರುತಿಸುತ್ತೇನೆ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಎ ಕೆ ಎ ವಕೀಲರಿಂದಃ</u>**

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.